ಅಧ್ಯಕ್ಷರು :- ಈಗ ನಿಲುವಳಿ ಸೂಚನೆಯನ್ನೇನು ನನಗೆ ಕಳುಹಿಸಿದ್ದಾರೆ, ಆ ಬಗ್ಗೆ ನಾನು ಅನುಮತಿಯನ್ನು ನಿರಾಕರಿಸಿದ್ದೇನೆ. ಇದನ್ನು ಇವೊತ್ತೇ ಎಷ್ಟು ಗಂಟೆಯಾದರೂ ಕೂಡ ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಬಹಳ ವಿಷಯಗಳನ್ನು ತರಬೇಕಾಗಿದೆ, ಏನಾದರೂ ಮಾಡಿ ಚರ್ಚೆಗೆ ಅವಕಾಶವನ್ನು ಈಗಲೇ ಕೊಡಿ.

ಅಧ್ಯಕ್ಷರು :- ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದೆನಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾವಾಗ?

ಅಧ್ಯಕ್ಷರು :- Time fix up ಮಾಡುತ್ತೇನೆ. ಈಗ ಬಿಲ್ ಬೇರೆ ಆಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಸುಮ್ಮನೆ ವೇಗ್ ಆಗಿ ಹೇಳುವಂಥ ವಿಷಯವಲ್ಲ. ನಾವು ಜಸ್ಟಿಫೈ ಮಾಡಬೇಕಲ್ಲ.

ಅಧ್ಯಕ್ಷರು :- ಮಾಧುಸ್ವಾಮಿಯವರೆ, ನಾನು ತಮಗೆ ಒಂದು ಗಂಟೆ ಕಾಲ ಅವಕಾಶ ಮಾಡಿಕೊಡುತ್ತೇನೆ. ಒಂದೊಂದಾಗಿ ತೆಗೆದುಕೊಳ್ಳುತ್ತೇನೆ. ದಯಮಾಡಿ ಸಹಕರಿಸಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ :- (ಅ) ಇನ್‌ಫೋಸಿಸ್‌ನ ನಾರಾಯಣ ಮೂರ್ತಿಗಳು ರಾಷ್ಟ್ರಗೀತೆಗೆ ಅವಮಾನ ಮಾಡಿರುವ ಬಗ್ಗೆ:

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ನಾನು ಹಿಂದೆಯೇ ಇನ್‌ಫೋಸಿಸ್ ನಾರಾಯಣಮೂರ್ತಿ ಬಗ್ಗೆ ಈ ಸದನದಲ್ಲಿ ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆದಿದ್ದೆ. ಅವರು ನಿನ್ನೆಯೇ ಈ ಸದನಕ್ಕೆ ಒಂದು ವರದಿಯನ್ನು ಸಲ್ಲಿಸುತ್ತೇನೆಂದು ಹೇಳಿದ್ದರು. ನಿನ್ನೆ ಮಾನ್ಯ ಪ್ರಕಾಶ್‌ರವರು ಇಡೀ ದಿನ ಸದನಕ್ಕೆ ಬರಲಿಲ್ಲ. ನಾನು ಇಡೀ ದಿನ ಅವರು ಬಂದು ಈ ಬಗ್ಗೆ ಹೇಳಬಹುದು, ಅವರು ಬಂದು ಹೇಳಿಕೆ ಕೊಡುತ್ತಾರೆ ಎಂದು ಕಾದಿದ್ದೆ. ನಾವು ಇಡೀ ದಿನ ಮಾನ್ಯ ಗೃಹ ಸಚಿವರನ್ನು ಕಾದುಕೊಂಡಿದ್ದೆವು. ಅವರೇನಾದರೂ ಬಂದು ಉತ್ತರ ಕೊಡುತ್ತಾರೆ ಎಂದುಕೊಂಡಿದ್ದೆವು. ಏಕೆಂದರೆ ಬಹಳ ಗಂಭೀರವಾದಂಥ ಪರಿಸ್ಥಿತಿ ಇದೆ. ರಾಷ್ಟ್ರಗೀತೆಗೆ ಅಗೌರವವಾಗಿರತಕ್ಕಂಥ ವಿಚಾರವಿದು. ಇಂಥದ್ದರಲ್ಲಿ ಕೇವಲ ಕರ್ನಾಟಕ ಸರ್ಕಾರ

ಮಾತ್ರವಲ್ಲ. ಕೇಂದ್ರ ಸರ್ಕಾರ ಕೂಡ ಇದರ ಬಗ್ಗೆ ಗಮನವನ್ನು ಹರಿಸಬೇಕು. ಇದರ ಬಗ್ಗೆ ಸರ್ಕಾರ ಯಾವುದನ್ನೂ ಮಾತನಾಡದೇ ಇರತಕ್ಕಂಥ ಸಂದರ್ಭದಲ್ಲಿ ಹಿರಿಯ ಸಾಹಿತಿಗಳೊಬ್ಬರು ಇದನ್ನು ಮೆಚ್ಚಿ ನಾರಾಯಣ ಮೂರ್ತಿಯವರು ಮಾಡಿರತಕ್ಕಂಥದ್ದು ಸರಿ, ಅವರೇನೂ ತಪ್ಪು ಮಾಡಿಲ್ಲವೆನ್ನತಕ್ಕಂಥ ರೀತಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜಕಾರಣಿಗಳು ಹೊಟ್ಟೆಕಿಚ್ಚಿನವರು, ಅವಿವೇಕಿಗಳು ಎಂದು ಅರ್ಥದಲ್ಲಿ ಹೇಳಿದ್ದಾರೆ. ನನಗೆ ಮಾನ್ಯ ಭೈರಪ್ಪನವರ ಬಗ್ಗೆ ಗೌರವವಿದೆ. ಅವರು ಏಕೆ ಈ ರೀತಿಯಲ್ಲಿ ಮಾತನಾಡಿದರೋ ನನಗರ್ಥವಾಗುತ್ತಿಲ್ಲ. ಬ್ಯಾಂಡ್ ಬಾರಿಸಿದರೆ ತಪ್ಪೇ ಎಂದು ಕೇಳಿದ್ದಾರೆ. ಬ್ಯಾಂಡ್ ಬಾರಿಸಿದರೆ ತಪ್ಪೇನಿಲ್ಲ. ಆದರೆ ನಾರಾಯಣ ಮೂರ್ತಿಯವರು ಇದಕ್ಕೆ ಕೊಟ್ಟಿರುವ ಕಾರಣವೇನು ಗೊತ್ತೇ? ವಿದೇಶದವರು ಇದ್ದಾರೆ, ವಿದೇಶದವರಿಗೆ ಅಗೌರವವಾಗಬಾರದು, ವಿದೇಶದವರಿಗೆ ತೊಂದರೆಯಾಗಬಾರದು, ವಿದೇಶದವರಿಗೆ ಮುಜುಗರವಾಗಬಾರದು, ಆದ್ದರಿಂದ ಬ್ಯಾಂಡ್ ಬಾರಿಸಿದ್ದು ತಪ್ಪು ಎನ್ನುವುದು ಅವರ ವಾದ.

ಅಧ್ಯಕ್ಷರು :– ವಾಟಾಳ್‌ರವರೆ, ಎಷ್ಟು ನಿಮಿಷ ಚರ್ಚೆ ಮಾಡುತ್ತೀರಿ? ದಯಮಾಡಿ ಸಹಕರಿಸಿ. ಅವರು ಉತ್ತರ ಹೇಳುತ್ತಾರೆ. ತಾವು ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ :– ಈಗ ಪ್ರಕಾಶ್‌ರವರು ಭೈರಪ್ಪನವರ ಹೇಳಿಕೆಯನ್ನು ಸಾರಾಸಗಟಾಗಿ ತಳ್ಳಿಹಾಕಿದ್ದೇವೆ ಎಂದು ಹೇಳಬೇಕು. ಭೈರಪ್ಪನವರು ಆ ರೀತಿ ಮಾತನಾಡತಕ್ಕಂಥ ರೀತಿಯಲ್ಲಿ ಏಕೆ ಹೋದರು? ನನಗಂತೂ ಬಹಳ ಅತ್ಯಂತ ನೋವಾಗುತ್ತಿದೆ. ಇಂಥ ಸಂದರ್ಭದಲ್ಲಿ ಭೈರಪ್ಪನವರು ನಾರಾಯಣ ಮೂರ್ತಿಯವರ ಅಭಿಪ್ರಾಯವನ್ನು ವಿರೋಧ ಮಾಡಬೇಕಾಗಿತ್ತು. ಆದರೆ ಅದನ್ನು ಬೆಂಬಲಿಸಿ ಮಾತನಾಡತಕ್ಕಂಥಾದ್ದು ಭೈರಪ್ಪನವರಿಗೆ ಶೋಭೆ ತರತಕ್ಕಂಥಾದ್ದಲ್ಲ. ನಮಗೇನೂ ಅಲ್ಲಿ ನೈಸ್ ಕಂಪನಿಯದ್ದೇನಿಲ್ಲ, ನಮ್ಮದೇನೂ ವ್ಯಾಪಾರವಿಲ್ಲ, ಅದನ್ನು ಹೇಳಿದ್ದಾರೆ ಭೈರಪ್ಪನವರು. ಇನ್ನೂ ಮತ್ತೊಂದನ್ನು ಹೇಳುತ್ತಾರೆ. ಸ್ಥಳೀಯರಿಗೆ ಶಕ್ತಿ ಇಲ್ಲವಂತೆ. ಈ ರಾಜ್ಯದಲ್ಲಿ ನಾರಾಯಣ ಮೂರ್ತಿ ಕೆಲಸ ಕೊಡಬೇಕಾದರೆ ನಮ್ಮ ಸ್ಥಳೀಯರಿಗೆ ಶಕ್ತಿ ಇಲ್ಲವಂತೆ, ಅರ್ಹತೆ ಇಲ್ಲವಂತೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ನಾರಾಯಣಮೂರ್ತಿಯವರನ್ನು ಈ ರಾಜ್ಯ ಬಿಟ್ಟು ಕಳುಹಿಸಿ. ನಮಗೆ ಬೇಕಾಗಿಲ್ಲ. ನಾರಾಯಣ ಮೂರ್ತಿಯವರು ಇನ್‌ಫೋಸಿಸ್ ಕಂಪನಿ ನಮಗೆ ಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿಯೇ ಇವರು ಗೌರವ ಕೊಡದೇ ಇದ್ದಮೇಲೆ, ರಾಜ್ಯದ ಜನತೆಗೆ ಅಪರಾಧ ಮಾಡಿರುವುದರಿಂದ, ಅಂದರೆ ರಾಷ್ಟ್ರಗೀತೆಗೆ ಇವರು ಅಪಮಾನ ಮಾಡಿದ್ದಾರೆ.

ಎರಡನೆಯದಾಗಿ ಕನ್ನಡಿಗರಿಗೆ ನೇರವಾಗಿ ಅಪಮಾನ ಮಾಡಿರುವುದರಿಂದ ರಾಜ್ಯ ಸರ್ಕಾರ ಇವರ ಮೇಲೆ ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಅವರ ಯಾವ ಕಂಪನಿಗಳೂ ಕೂಡ ಬೇಕಾಗಿಲ್ಲ. ಅವರ ವ್ಯವಸ್ಥೆ ನಮಗೆ ಬೇಕಾಗಿಲ್ಲ. ಅವರ ಸಂಪೂರ್ಣವಾದಂಥ ಪಂಚತಾರಾ ವ್ಯವಸ್ಥೆಗಳು ನಮಗೆ ಬೇಕಾಗಿಲ್ಲ. ಅವರ ಕಂಪನಿಗಳು ನಮಗೆ ಬೇಕಾಗಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳು ಈಗ ಏನು ಉತ್ತರ ಕೊಡುತ್ತಾರೋ ಮೊದಲು ಕೊಡಲಿ.

ಶ್ರೀ ಹೆಚ್. ಆಂಜನೇಯ :- ಮಾನ್ಯ ಅಧ್ಯಕ್ಷರೆ, ಭೈರಪ್ಪನವರ ಹೇಳಿಕೆಗೆ ಈ ದಿನ ನಮ್ಮ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪನವರು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಪತ್ರಿಕೆಯಲ್ಲಿ ಅದನ್ನು ಓದಿರಬಹುದು. ಬರಗೂರು ರಾಮಚಂದ್ರಪ್ಪನವರು ಅವರಿಗೆ ಸರಿಯಾದ ಬೆಂಡ್ ಎತ್ತಿದ್ದಾರೆ. ಸರಿಯಾಗಿ ಮಾನವನ್ನು ಹರಾಜು ಹಾಕಿದ್ದಾರೆ. ಆದುದರಿಂದ ಭೈರಪ್ಪನವರ ಹೇಳಿಕೆ ಸರಿಯಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿರುವುದಕ್ಕೆ ನಾನು ಅತ್ಯಂತ ಗೌರವದಿಂದ ಅವರಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೆ. ಈ ಸದನದಲ್ಲಿ ಸದಸ್ಯರಲ್ಲದೇ ಇರುವವರ ಹೆಸರನ್ನು ತೆಗೆದುಕೊಂಡು ಮಾತನಾಡುವುದಲ್ಲ. ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎನ್ನುವುದಿದ್ದಾಗ, ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿಮಿತಿಗಳನ್ನು ಮೀರಿ ನಡೆದುಕೊಂಡರೆ, ಅದಕ್ಕೆ ಕಾನೂನಿನಲ್ಲಿ ಅವಕಾಶಗಳಿವೆ. ಮೊದಲು ನಾರಾಯಣ ಮೂರ್ತಿಗಳ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ತಾವು ಏನು ಮೂಲಭೂತವಾಗಿ insult to National Honour Act of 1971 section 3 ಕೆಳಗಡೆ ಇದೆ, ಅದರ ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ, ಅದು ಅಗತ್ಯವಿರುವುದರಿಂದ ಸರ್ಕಾರ ಉತ್ತರ ಕೊಡುತ್ತದೆ. ಆದರೆ ಭೈರಪ್ಪನವರು ಇದರ ವಿಚಾರದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆಂದು ಹೇಳಿ ಭೈರಪ್ಪನವರ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದು ಸರಿಯಾದುದಲ್ಲ ಮತ್ತು ಅವರದೇ ಆದಂತಹ ಕೆಲವು ಅಭಿಪ್ರಾಯಗಳು ಇವೆ. ಹಿಂದೆ ಬರೆದಿರತಕ್ಕಂಥ ಕಾದಂಬರಿಗಳು ಮತ್ತು ಪುಸ್ತಕಗಳ ಮೇಲೆ, ಭೈರಪ್ಪನವರಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ, ಬೇರೆ ಬೇರೆ ಸಂದರ್ಭಗಳು ಬಂದಾಗ ಕೂಡ ಚರ್ಚೆಗಳಾಗಿವೆ. ಭೈರಪ್ಪನವರ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡೋಣ. ಏಕೆಂದರೆ ಅವರು ಸದನದ ಸದಸ್ಯರಲ್ಲ.

ಇಲ್ಲಿ ಬಂದಿರುವಂತಹ ವಿಷಯ ನಾರಾಯಣ ಮೂರ್ತಿಯವರದು. Globle Training Centre ಎಂದು ಏನಿದೆ, ಮಾನ್ಯ ರಾಷ್ಟ್ರಪತಿಗಳು ಆ ದಿವಸ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ Band music ನಿಂದ ರಾಷ್ಟ್ರಗೀತೆಯನ್ನು ಹಾಡಿಸಿದ್ದಾರೆ. ಆ ಸಂದರ್ಭದಲ್ಲಿ ಯಾವುದೇ ರೀತಿಯಾದಂತಹ ಅಪಮಾನ ಮಾಡುವಂತಹ ವಿಚಾರ ನಡೆದಿಲ್ಲ. ಅದರ ಜೊತೆಗೆ " ಭಾರತ್ ಮಾತಾ ಕೀ ಜೈ" ಎಂದು ಘೋಷಣೆ ಮಾಡುವ ಮೂಲಕ ಆ ಸಭೆ ಮುಕ್ತಾಯವಾಗಿದೆ. ಆಗ ಪೊಲೀಸ್ ಅಧಿಕಾರಿಗಳು ಮತ್ತು ಉನ್ನತ ಅಧಿಕಾರಿಗಳೆಲ್ಲರೂ ಕೂಡ ಮಾನ್ಯ ರಾಷ್ಟ್ರಪತಿಗಳ ಜೊತೆ ಇದ್ದಾರೆ. ಅಲ್ಲಿ ಯಾವುದೇ ರೀತಿಯಾದ ರಾಷ್ಟ್ರ ಗೌರವಕ್ಕೆ ಅಪಮಾನ ಮಾಡುವಂತಹ ವಿಚಾರ ಆ ಸಂದರ್ಭದಲ್ಲಿ ನಡೆದಿಲ್ಲ. ಆದರೆ ಮಾನ್ಯ ವಾಟಾಳ್ ನಾಗರಾಜ್ ಮತ್ತು ಹಿರಿಯ ಇತರ ಸದಸ್ಯರು ಪ್ರಸ್ತಾಪ ಮಾಡಿದಂತೆ ತೊಂದರೆಯಾಗಿರುವುದು ಯಾವುದೆಂದರೆ, ಸಾಯಂಕಾಲ ಅವರು ಒಂದು Press conference ಅನ್ನು ಮಾಡಿದ್ದಾರೆ. ಆ ಒಂದು Press Conference ನಲ್ಲಿ ಪೊಲೀಸ್ ಅಧಿಕಾರಿಗಳಾಗಲೀ ಅಥವಾ ಸರ್ಕಾರಿ ಅಧೀಕಾರಿಗಳಾಗಲೀ ಇಲ್ಲ. ಆ ಸಂದರ್ಭದಲ್ಲಿ ಒಬ್ಬರು ಪತ್ರಕರ್ತರು ಪ್ರಶ್ನೆಯನ್ನು ಮಾಡಿ, ತಾವು ರಾಷ್ಟ್ರಗೀತೆಯನ್ನು ಹಾಡಬಹುದಾಗಿತ್ತು, ತಾವು ಹಾಡದೇ ಈ ರೀತಿಯಾಗಿ ಸಂಗೀತದ ಮೂಲಕ ಮಾಡಿದ್ದು ಸರಿಯೇ ಎಂದು ಕೇಳಿದ್ದಕ್ಕೆ, ಆಗ ಅವರು ಅದನ್ನು ಸಂಗೀತದ ಮೂಲಕ ಹಾಡಲು ಅವಕಾಶವಿದೆ, ಅದೇನು ತಪ್ಪಾಗುವುದಿಲ್ಲವೆನ್ನುವ ಮಾತನ್ನು ಹೇಳಬಹುದಾಗಿತ್ತು. ಆದರೆ ಆ ರೀತಿ ಹೇಳುವುದು ಬಿಟ್ಟು, ಅದರ ಜೊತೆಗೆ ಮಾನ್ಯ ನಾರಾಯಣ ಮೂರ್ತಿಯವರು ಪ್ರಾಯಶಃ ಬೇರೆ ಬೇರೆ ಕಾರಣಗಳು ಏನೇನಿವೆಯೋ ಅದರ ಬಗ್ಗೆ ನಾನು ಊಹೆ ಮಾಡುವುದಿಲ್ಲ, ಆದರೆ ಅವರು ಪ್ರಸ್ತಾಪ ಮಾಡಿದ ಅನೇಕ ಮುಖ್ಯ ಪ್ರಶ್ನೆಗಳೂ ಕೂಡ ಇವೆ. ಅದರಲ್ಲಿ ಅವರು ಹೇಳುವಾಗ, ಪರದೇಶದ ಅನೇಕ ವಿದ್ಯಾರ್ಥಿಗಳು ಇಲ್ಲಿಗೆ ತರಬೇತಿಗೆ ಬಂದಿದ್ದಾರೆ, ಅವರ ಮನಸ್ಸಿಗೆ ನೋವಾಗಬಾರದು, ಮುಜುಗರ ಉಂಟಾಗಬಾರದು ಎನ್ನುವ ಕಾರಣಕ್ಕಾಗಿ ಈ ರೀತಿ ನುಡಿಸಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಯಾರೂ ಇರಲಿಲ್ಲ. ಆದರೆ ಅವರು ಈ ರೀತಿ ಹೇಳಿರತಕ್ಕಂಥಾದ್ದು ಅಕ್ಷಮ್ಯ ಅಪರಾಧ. ಅವರು ಈ ರೀತಿಯಾಗಿ ಹೇಳುವ ಅಗತ್ಯವಿರಲಿಲ್ಲ. ಪರದೇಶದವರಿಗೆ ನೋವಾಗಬಹುದು ಅಥವಾ ಮುಜುಗರ ಉಂಟಾಗಬಹುದು ಎನ್ನುವುದಾಗಿದ್ದರೆ ಅದಕ್ಕಿಂತ ಅಪರಾಧ ಮತ್ತೊಂದಿಲ್ಲ. ಯಾರಾದರೂ ಕೂಡ

ರಾಷ್ಟ್ರಕ್ಕೆ ಅಭಿಮಾನವನ್ನು ತೋರಿಸಬೇಕಾದರೆ, ರಾಷ್ಟ್ರಾಭಿಮಾನದ ಚಿಹ್ನೆ ಇರತಕ್ಕಂಥಾದ್ದರಲ್ಲಿ, ಅದರ ಧ್ವಜ, ರಾಷ್ಟ್ರಗೀತೆ, ಸಂವಿಧಾನ ಮತ್ತು ಅದರ ಸೈನ್ಯ. ಇವುಗಳು ಬಹಳ ಮುಖ್ಯವಾದ ಚಿಹ್ನೆಗಳು. ಈ ನಾಲ್ಕು ಸ್ತಂಭಗಳ ಮೇಲೆ ಒಂದು ರಾಷ್ಟ್ರದ ಅಭಿಮಾನ ಎನ್ನುವಂಥಾದ್ದು, ರಾಷ್ಟ್ರ ಎಂದು ಗುರುತಿಸುವಂಥಾದ್ದು ಇದೆ. ಆ ಕಾರಣಕ್ಕಾಗಿ ನಮ್ಮ ರಾಷ್ಟ್ರವನ್ನು ಈ ವಿಚಾರದಲ್ಲಿ ಗುರುತಿಸಲ್ಪಟ್ಟಿರತಕ್ಕಂಥಾದ್ದು ಇದೆ. ಆದುದರಿಂದ ಅವರು ಈ ಮಾತನ್ನು ಹೇಳಬೇಕಾಗಿರಲಿಲ್ಲ. ಇದಕ್ಕಾಗಿ ಮೈಸೂರಿನಲ್ಲಿ ಇರುವಂತಹ ಒಬ್ಬ ನಾಗರೀಕರು ಇವರ ಮೇಲೆ ಇಂತಹ ಹೇಳಿಕೆಯನ್ನು ಕೊಟ್ಟಿದ್ದೀರಿ ಎಂದು ಹೇಳಿ ಫಿರ್ಯಾದಿಯನ್ನು ಕೊಟ್ಟಿದ್ದಾರೆ. ಅಲ್ಲಿ A.M. ಭಾಸ್ಕರ್ ಎಂದು ಒಬ್ಬ ವಕೀಲರು, ಅಲ್ಲಿ ಅವರು ಕೊಟ್ಟಿರತಕ್ಕಂಥ ಫಿರ್ಯಾದಿಯ ಮೇಲೆ ಅಲ್ಲಿ ಒಂದು ಪೊಲೀಸ್ ಸ್ಟೇಶನ್‌ನವರು NCR No 196 / 07 ಎಂದು ಹೇಳಿ ಆ case ಅನ್ನು ದಾಖಲು ಮಾಡಿಕೊಂಡಿದ್ದೇವೆ. ಆ ಕೇಸ್ ವಿಚಾರಣೆ ಹಂತದಲ್ಲಿದೆ. ಅದು ವಿಚಾರಣಾ ಹಂತದಲ್ಲಿರುವುದರಿಂದ, ಅದರ ವಿಚಾರಣೆಯಾದ ಮೇಲೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದರ ಬಗ್ಗೆ ನಂತರದಲ್ಲಿ ನಾನು ಸಭೆಗೆ ಅರಿಕೆ ಮಾಡಿಕೊಳ್ಳುತ್ತೇನೆ. ಯಾರಾದರೂ, ಎಂತಹ ದೊಡ್ಡ ಸ್ಥಾನದಲ್ಲಿದ್ದಂತಹವರಾದರೂ ಕೂಡ ಇಂತಹ ಮಾತುಗಳನ್ನು ಪ್ರಸ್ತಾಪ ಮಾಡುವುದಾಗಲಿ, ಅದರ ಮೂಲಕ ಇಂತಹ ವಿವಾದಾತ್ಮಕವಾದಂತಹ ಹೇಳಿಕೆಯನ್ನು ಹೇಳುವುದು ಸರಿಯಾದುದಲ್ಲ. ಇದೇ ರೀತಿಯಾಗಿ ಮಾಹಿತಿ ತಂತ್ರಜ್ಞಾನಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರತಕ್ಕಂಥ ಅನೇಕ ಕಂಪನಿಗಳು ಬೆಂಗಳೂರಿನಲ್ಲಿ ಮತ್ತು ಭಾರತ ದೇಶದ ಬೇರೆ ಬೇರೆ ಭಾಗಗಳಲ್ಲಿ ಕೂಡ ಇವೆ. ಇದರ ಮೂಲಕ ನಾವು ಯಾರಿಗಾದರೂ ಉಪದೇಶ ಮಾಡುತ್ತೇವೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಎಲ್ಲರೂ ಕೂಡ ತಮ್ಮ ಇತಿಮಿತಿಗಳಲ್ಲಿ ಆ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೇ ಹೊರತಾಗಿ ಅದರ ಆಚೆ ಹೋದರೆ ಇಂತಹ ತೊಂದರೆಗಳಿಗೊಳಗಾಗುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಭೈರಪ್ಪನವರ ಕಾದಂಬರಿಗಳ ಬಗ್ಗೆ ಅದು ಯಾವ ರೀತಿಯಾಯಿತು ಎಂದು ಹೇಳಿ ಬೇಕಾದಷ್ಟು ವಿಚಾರ ಸಂಕೀರ್ಣಗಳಾಗಿವೆ. ಮಾನ್ಯ ಖಂಡ್ರೆಯವರು ಇದ್ದಂತಹ ಸಂದರ್ಭದಲ್ಲಿ ಬಸವಣ್ಣನವರ ಮೇಲೆ ಬಂದಂತಹ ನಾಟಕವನ್ನು ಮುಚ್ಚಿ ಹಾಕಬೇಕೆಂದು ಅದನ್ನು ಬಹಿಷ್ಕಾರ ಹಾಕಿರತಕ್ಕಂಥಾದ್ದು, ಈ ರೀತಿ ಅನೇಕ ಚರ್ಚೆಗಳಾಗಿವೆ. ಆದರೆ ಈ ಸಂದರ್ಭದಲ್ಲಿ ಇದನ್ನು ಅಲ್ಲಿಯೇ ಕೈಬಿಡುವುದೊಳ್ಳೆಯದು ಎಂದು ಹಿರಿಯರಾದ ಮಾನ್ಯ ಶಾಸಕರುಗಳಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಭೈರಪ್ಪನವರ ವಿಷಯ ಇಲ್ಲಿ ಏಕೆ ಪ್ರಸ್ತಾಪವಾಯಿತೆಂದರೆ ಶಾಸನ ಸಭೆಯ deliberations ಅನ್ನು ಅವರು ಹೀಯಾಳಿಸಿ ಮಾತನಾಡಿದಾಗ, ಹೊರಗಡೆ ಇರುವವರ ವಿಚಾರ ಇಲ್ಲಿ ಮಾತನಾಡಬಾರದೆಂದು ಹೇಳಿದರೆ, ಕಾನೂನು ಮಂತ್ರಿಯವರೇ ಹಾಗಾದರೆ ಈ ಸಭೆಯ ಗೌರವ ಏನು? ಇಲ್ಲಿ ಚರ್ಚೆಯಾಗಿದ್ದನ್ನು ಅವರು ಅವಹೇಳನಕಾರಿಯಾಗಿ ಮಾತನಾಡಿದ್ದು ತಪ್ಪು. ನಾವ್ಯಾರು ಇಲ್ಲಿ ಭೈರಪ್ಪನವರನ್ನು ತರುವುದಕ್ಕೆ ಇಷ್ಟ ಪಡುವುದಿಲ್ಲ. ಭೈರಪ್ಪನವರು ದೊಡ್ಡವರು, ಬುದ್ಧಿವಂತರು, ಸಾಹಿತಿಗಳು. ಆದರೆ ಅವರು, ಶಾಸಕರಿಗೆ ಯಾರಿಗೂ ಬುದ್ಧಿಯಿಲ್ಲ, ಇವರು ಇಲ್ಲಿ ಚರ್ಚೆಮಾಡಬಾರದಾಗಿತ್ತು, ಈ ರೀತಿ ಈ ಮನೆಯ ಗೌರವ ಹಾಳುಮಾಡುವಂತಹ ಚರ್ಚೆಗಳಾದಾಗ ಕೂಡ ನಾವು ಅವರ ಸುದ್ದಿಯನ್ನು ಮಾತನಾಡಬಾರದೇ?

ಶ್ರೀ ಎಂ.ಪಿ. ಪ್ರಕಾಶ್ :- ನಾವು ಎಲ್ಲಾ ಸಂದರ್ಭಗಳಲ್ಲಿ ಯಾವ ಸಂಪ್ರದಾಯಗಳನ್ನು ಅನುಸರಿಸಬೇಕು ಎಂದು ಮಾತೃ ಸಂಸ್ಥೆಯಾದ England ದೇಶದ ಪರಿಪಾಠವನ್ನು ನಾವು ನೋಡುತ್ತಿರುತ್ತೇವೆ. ಇಂತಹ ವಿಚಾರಗಳಲ್ಲಿ ಬಹಳ ಸೂಕ್ಷ್ಮವಾದಂಥಾದ್ದು ಎಂದರೆ ಉದಾರತೆಯಿಂದ ನಡೆದುಕೊಳ್ಳಬೇಕು ಎನ್ನುವಂಥಾದ್ದು ಇದೆ. ಫತ್ವಾ ಬಂದಿರತಕ್ಕಂಥ ಸಂದರ್ಭದಲ್ಲಿ England ನ ಜನಜೀವನದ ಬಗ್ಗೆ ಟೀಕೆ ಮಾಡಿರತಕ್ಕಂಥ ಸಲ್ಮಾನ್ ರಶ್ದಿಯವರನ್ನು ಈಗ England ನವರು ಸಾಕುತ್ತಿದ್ದಾರೆ. ಅವರಿಗೆ ಸಂಪೂರ್ಣವಾದಂತಹ ರಕ್ಷಣೆಯನ್ನು ಕೂಡ ಕೊಟ್ಟಿದ್ದಾರೆ. ಯುದ್ಧ ಮಾಡಿದಂತಹ ಸಂದರ್ಭದಲ್ಲಿ Factionist ಎಂದೇಳಿ ಬರ್ನಾಡ್ ಷಾ ರವರ ಮತ್ತು ಬ್ರಿಟನ್ ರಸಲ್ ವಿರುದ್ಧವಾಗಿ ಕೇಸ್‌ನ್ನು ಕೂಡ ದಾಖಿಲು ಮಾಡದೇ, ಅದನ್ನು ಹೇಳತಕ್ಕಂಥ ಅಧಿಕಾರ ಅವರಿಗೆ ಇದೆ ಎನ್ನುವುದನ್ನು England ನಲ್ಲಿ ತೋರಿಸಿಕೊಟ್ಟಿದ್ದಾರೆ. ನಾನು ಹೇಳುವುದು ಹೊರಗಡೆ ಇರುವವರು ಕೂಡ ತಮ್ಮ ಔಚಿತ್ಯವನ್ನು ಮೀರಿ ಮಾತನಾಡಬಾರದು. ರಾಜಕಾರಣಿಗಳು ಎಂದು ಹೇಳಿದ ತಕ್ಷಣ ನಾವ್ಯಾರು ಕೂಡ ಅಷ್ಟು ಸೂಕ್ಷ್ಮರಾಗುವುದು ಬೇಡ. ಆದರೆ ಶಾಸನ ಸಭೆಯ ಸದಸ್ಯರು ಮಾಡಿರತಕ್ಕಂಥ ಚರ್ಚೆಯ ಬಗ್ಗೆ ಅವರು ಹೊರಗಡೆ ಹೇಳಿರತಕ್ಕಂಥಾದ್ದು ಕೂಡ ತಪ್ಪು. ಆದರೆ ಇದರಲ್ಲಿ ಸ್ವಲ್ಪ ಉದಾರತೆಯನ್ನು ತೋರಿಸೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಅವರನ್ನು ಗಲ್ಲಿಗೆ ಹಾಕಿ ಎಂದು ಹೇಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾವು ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇವೆಂದು ಆರಂಭದಲ್ಲಿ ಹೇಳಿದ್ದು. ಆದರೆ ಅವರು ನಾರಾಯಣ ಮೂರ್ತಿಯವರನ್ನು ಸಮರ್ಥನೆ ಮಾಡಿಕೊಂಡು ಏಕೆ ಮಾತನಾಡಿದರು?

ಶ್ರೀ ಎಂ.ಪಿ. ಪ್ರಕಾಶ್ :- ನೋಡಿ, England ಯುದ್ಧವನ್ನು ಸಾರಿರತಕ್ಕಂಥ ಸಂದರ್ಭದಲ್ಲಿ ಕೂಡ.....

ಶ್ರೀ ವಾಟಾಳ್ ನಾಗರಾಜ್ :- ನಾರಾಯಣ ಮೂರ್ತಿಯನ್ನು ಸಮರ್ಥನೆ ಮಾಡಿರುವುದರ ಬಗ್ಗೆ ನಾನು ಹೋಗುವುದಿಲ್ಲ. ಆದರೆ ಈ ಶಾಸನ ಸಭೆಯಲ್ಲಿ ನಡೆದಿರುವಂತಹ ವಿಚಾರ ಒಂದು. ನಾರಾಯಣ ಮೂರ್ತಿಯವರು ರಾಷ್ಟ್ರಗೀತೆ ಬಗ್ಗೆ ಏನು ಹೇಳಿದ್ದಾರೆ, ಅದು ಸರಿ ಎನ್ನುವ ಮಾತನ್ನು ಭೈರಪ್ಪನವರು ಹೇಳಿದ್ದಾರೆ.

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೆ, ಉತ್ತರ ಹೇಳಿದ್ದಾರೆ, ಮತ್ತೆ,ಮತ್ತೆ ಮುಂದುವರೆಸಿಕೊಂಡು ಹೋಗುವ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಸ್ಥಳೀಯರಿಗೆ ಶಕ್ತಿ ಇಲ್ಲವೆಂದು ಹೇಳಿ ಅದನ್ನು ಸಮರ್ಥಿಸಿಕೊಂಡಿದ್ದಾರೆ. ನನಗೆ ಭೈರಪ್ಪನವರ ಬಗ್ಗೆ ವೈಯಕ್ತಿಕವಾಗಿ ಮಾತನಾಡಬೇಕು ಎನ್ನುವ ಉದ್ದೇಶವಿಲ್ಲ. ಸರ್ಕಾರ ಏನು ತಪ್ಪಾಗಿದೆ, ಅಪರಾಧವಾಗಿದೆ ಎಂದು ಒಪ್ಪಿಕೊಂಡಿದ್ದೀರಿ, ಸರ್ಕಾರವೇ ಒಪ್ಪಿಕೊಂಡ ಮೇಲೆ ಮುಂದೆ ನಾರಾಯಣ ಮೂರ್ತಿಯವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :- ಇದರ ಬಗ್ಗೆ ಕೇಸ್ ಪೊಲೀಸ್ ಸ್ಟೇಶನ್‌ನಲ್ಲಿ ಇದೆ.

ಶ್ರೀ ಹೆಚ್.ಡಿ. ಬಸವರಾಜು :- ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಅಧ್ಯಕ್ಷರು :- ವಿರೋಧ ಪಕ್ಷದ ನಾಯಕರು ಕೂಡ ಏನೋ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು :- ಅದರ ಬಗ್ಗೆ ಹೇಳುವುದಕ್ಕೆ ಹೊರಟಿದ್ದೇನೆ, ಅವರ ಚರ್ಚೆಯಾದ ಮೇಲೆ ನಮಗೆ ಅವಕಾಶ ಕೊಡಬೇಕು ಎಂದು ಕೇಳುತ್ತಿದ್ದೇನೆ. ಏಕೆಂದರೆ ಕೊಡಗು ಜಿಲ್ಲೆಯಲ್ಲಿ ಜಮ್ಮಾ ಮತ್ತು ಬಾಣೆ ವಿಚಾರದಲ್ಲಿ ಬಹಳಷ್ಟು ವರ್ಷಗಳಿಂದ ನಾವು ನೋವು ಅನುಭವಿಸುತ್ತಿದ್ದೇವೆ. ಇವತ್ತಿನ ಕಾರ್ಯಕಲಾಪಗಳ

ಪಟ್ಟಿಯಲ್ಲಿ ಈ ವಿಷಯ ಕೊಟ್ಟಿದ್ದೀರಿ. ಅವರ ವಿಷಯ ಮುಗಿದ ತಕ್ಷಣ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು :– ಈಗ ವಿಧೇಯಕಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಎನ್. ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಸಹಕಾರ ಮಾಡಬೇಕು. ನಾವು ಮಾತನಾಡುವುದನ್ನು ಕೇಳಿ.

ಅಧ್ಯಕ್ಷರು :– ಈ ವಿಧೇಯಕಗಳನ್ನು ಹತ್ತತ್ತು ನಿಮಿಷದಲ್ಲಿ pass ಮಾಡಿಬಿಡೋಣ.

ಶ್ರೀ ಎನ್. ಧರ್ಮಸಿಂಗ್ :– ನಿನ್ನೆ Parliamentary Affairs Minister ರವರು ಸದನ ಪ್ರಾರಂಭವಾದಮೇಲೆ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭ ಮಾಡುತ್ತೇವೆಂದು ಒಂದು ಆಶ್ವಾಸನೆ ಕೊಟ್ಟರು. 134 ತಾಲ್ಲೂಕುಗಳಲ್ಲಿ ಬರಗಾಲ ಇದೆ, ಇದು ನಮ್ಮ ಪಕ್ಷಕ್ಕೆ ಸಂಬಂಧಪಟ್ಟಂತಹ ವಿಚಾರ ಅಲ್ಲ. ಇಡೀ ಸದನದ ಸದಸ್ಯರ ಅಭಿಪ್ರಾಯವನ್ನು ತಾವು ತಿಳಿದುಕೊಳ್ಳಬಹುದು. ಇವತ್ತು ಸಾಕಷ್ಟು ತೊಂದರೆಯಾಗಿದೆ. ಇವತ್ತು ಸದನದ ಕಲಾಪ ಕೊನೆಯ ದಿನವಾಗಿದೆ. ನಾವೆಲ್ಲರೂ ಕೂಡ ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗಬೇಕಾಗಿದೆ. ಕುಡಿಯುವ ನೀರು ಮತ್ತು ಮೇವಿನ ಸಮಸ್ಯೆ ಇದೆ, ಇನ್ನೂ Task Force Committee constitute ಆಗಿಲ್ಲ. ಇನ್ನು ಇಲ್ಲಿ ಸಾಕಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಕೇಂದ್ರಕ್ಕೆ ನಿಯೋಗ ಹೋಗಬೇಕೆಂದು ಇದೆ, ಅಲ್ಲಿಗೆ ಬರುತ್ತೇವೆ. ಕೇಂದ್ರ ಸರ್ಕಾರದಿಂದ ಬಂದಂತಹ ಹಣ ಎಷ್ಟು ಬಿಡುಗಡೆ ಮಾಡಿದ್ದೀರಿ? ಮಾನ್ಯ ಕಂದಾಯ ಸಚಿವರು ಕೂಡ ಹೇಳಿದ್ದಾರೆ. ಇದರ ಬಗ್ಗೆ ವಿವರವಾದ ಚರ್ಚೆ ಕೂಡ ಆಗಬೇಕಾಗಿದೆ. ನಾನು ಸುಮ್ಮನೆ ರಾಜಕೀಯ ಮಾಡುತ್ತಾ ಇಲ್ಲ. ಇವತ್ತು ಯಾವ ಕ್ಷೇತ್ರದಲ್ಲೂ ಕೂಡ ಬರಗಾಲದ ಬಗ್ಗೆ ಪರಿಣಾಮಕಾರಿಯಾಗಿ ಕೆಲಸವಾಗುತ್ತಿಲ್ಲ. ನೀರಿನ ತೊಂದರೆ ಇದೆ, ನೀವೆ ನಿಮ್ಮ report ನಲ್ಲಿ ಹೇಳಿದ್ದೀರಿ. 4,443 ಗ್ರಾಮಗಳು ಏನು, ಇದಕ್ಕೆ ಇನ್ನೂ ಹಣ ಬಿಡುಗಡೆ ಮಾಡಿಲ್ಲ. ಅದಕ್ಕೆ ಇವತ್ತು ನಿಯಮ 69 ರ ಅಡಿಯಲ್ಲಿ.....

ಶ್ರೀ ಹೆಚ್.ಡಿ. ಬಸವರಾಜು :– ಮಾನ್ಯ ಅಧ್ಯಕ್ಷರೆ, ನಮ್ಮ ಸಮಸ್ಯೆ ಏನು ಇದೆಯೆಂದರೆ ಬಹಳಷ್ಟು ವರ್ಷಗಳಿಂದ ಜಮ್ಮಾ ಮತ್ತು ಬಾಣೆ ವಿಚಾರ ಇತ್ಯರ್ಥವಾಗದೇ ಇರುವಂಥಾದ್ದು. ಈಗ ಇದು ಎರಡನೆಯ ಬಾರಿ ಸದನದ ಮುಂದೆ ಬಂದಾಗಲೂ ನಮಗೆ ಸಮಯಾವಕಾಶ ಸಿಗುತ್ತದಾ, ಇಲ್ಲವಾ ಎಂಬುದು

ನಮಗೆ ಸಂದೇಹವಾಗಿಬಿಟ್ಟಿದೆ. ತಾವು ನಮಗೆ ಖಂಡಿತವಾಗಿ ಅವಕಾಶ ಕೊಡುತ್ತೇವೆಂದು ಹೇಳಿದರೆ, ನಮ್ಮದು ಏನು ಅಭ್ಯಂತರವಿಲ್ಲ.

ಅಧ್ಯಕ್ಷರು :– ಕೊಡುತ್ತೇನೆ, ಎಂದು ಹೇಳುತ್ತಿದ್ದೇನೆ. ಈಗ ತಾವು ಕುಳಿತುಕೊಳ್ಳಿ, ಈಗ ಸರ್ಕಾರಕ್ಕೆ ಪ್ರಸ್ತಾಪ ಮಾಡಿದ್ದಾರೆ, ಈಗ ಕುಳಿತುಕೊಳ್ಳಿ, ನಿಮಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಮಾನ್ಯ ಅಧ್ಯಕ್ಷರೆ, ಅದು ಮುಗಿದ ತಕ್ಷಣ ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ವಿಷಯ :– (ಆ) ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಬಗ್ಗೆ :

ಶ್ರೀ ಎನ್. ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಪ್ರವಾಸದಲ್ಲಿ ಇದ್ದಾರೆ. ಇಲ್ಲಿ ಸದನ ನಡೆಯುತ್ತಿದೆ, ರಾಜ್ಯದ ಉಪ ಮುಖ್ಯಮಂತ್ರಿಯವರು ಹಣಕಾಸಿನ ಮಂತ್ರಿಗಳಾಗಿದ್ದಾರೆ. ನಿನ್ನೆ ಅವರು ಗುಲ್ಬರ್ಗಾದಲ್ಲಿ regional imbalance ಅನ್ನು ಸರಿಪಡಿಸುವುದಕ್ಕೆ 32 ಸಾವಿರ ಕೋಟಿ ರೂಪಾಯಿಗಳ ಖರ್ಚನ್ನು ಕೊಡುತ್ತೇನೆಂದು ಹೇಳಿದ್ದಾರೆ. 203 ಕೋಟಿ ರೂಪಾಯಿಗಳನ್ನು ಕೊಟ್ಟು, 217 ಕೋಟಿ ರೂಪಾಯಿಗಳನ್ನು ಮಾಡುವಂಥ ರೀತಿಯಲ್ಲಿ ಸದನದ ಹಕ್ಕುಚ್ಯುತಿಯಾಗಿದೆಯೆಂದು ಹೇಳಿದ್ದೇವೆ. ಈಗ ಸದನ ನಡೆಯುವಂಥ ಕಾಲದಲ್ಲಿ ಇವತ್ತು ವಿಕಾಸಯಾತ್ರೆಯಲ್ಲಿ ಅವರು ಸಾರಥಿಯಾಗಿ ಭಾಗವಹಿಸಿ, 32 ಸಾವಿರ ಕೋಟಿ ರೂಪಾಯಿಗಳನ್ನು, ಇವತ್ತು ಬಜೆಟ್‌ನಲ್ಲಿನ ಹಣಕ್ಕಿಂತ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಕೂಡ ಚರ್ಚೆಯಾಗಬೇಕಾಗಿದೆ. ಅದಕ್ಕೆ ನಾವು ಈ ಎರಡೂ ವಿಷಯಗಳನ್ನು ಕೂಡಿಸಿದ್ದು, ಈಗ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭವಾಗಬೇಕು. ಈಗ ವಿಧೇಯಕವನ್ನು ತೆಗೆದುಕೊಳ್ಳುವಂಥಾದ್ದು ಸರಿಯಲ್ಲ. ರಾಜ್ಯದ ಹಿತದೃಷ್ಟಿಯಿಂದ, ಇವತ್ತು ರಾಜ್ಯದಲ್ಲಿ ಏನು ತೊಂದರೆಯಾಗಿದೆ. ಇವತ್ತು ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ತಾವು ಈ ಚರ್ಚೆಯನ್ನು ಈಗಲೇ ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕು. ತದನಂತರ ವಿಧೇಯಕ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.